ಕುಖ್ಯಾತ ಗಂಧದ ಕಳ್ಳ ಸಾಗಣೆದಾರನ ಬಂಧನದ ಬಗ್ಗೆ

೧೪೩. ಶ್ರೀ ಪಿ. ಜಿ. ಆರ್. ಸಿಂಧ್ಯ (ಕನಕಪುರ).—ಮಾನ್ಯ ಅರಣ್ಯ ರಾಜ್ಯ ಖಾತೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕುಖ್ಯಾತ ಗಂಧದ ಕಳ್ಳಸಾಗಾಣಿಕೆದಾರ ವೀರಪ್ಪನನ್ನು ಬಂಧಿಸಲು ಕಾರ್ಯಮಗ್ನರಾಗಿರುವ ಪೋಲೀಸ್ ದಳದ ಸಂಖ್ಯೆ ಎಷ್ಟು ?

ಆ) ಅರಣ್ಯ ಇಲಾಖೆಯ ಕಾರ್ಯಾಚರಣೆಯ ದಳದ ಸಂಖ್ಯೆ ಎಷ್ಟು ?

ಇ) ಇದಕ್ಕಾಗಿ ಇದುವರೆಗೂ ಖರ್ಚಾಗಿರುವ ಹಣವೆಷ್ಟು ?

ಈ) ವೀರಪ್ಪನ್ ಪೋಲೀಸರ ಕೈಗೆ ಸಿಕ್ಕಿ ಸಾಪತ್ತ್ಯೆಯಾಗಿರುವುದು ನಿಜವೇ ?

ಶ್ರೀ ಇ. ಟಿ. ಶಂಬುನಾಥ್ (ಅರಣ್ಯ ಸಚಿವರು).—

ಅ) ಒಟ್ಟು ೧೦೨ ಜನ ಅಧಿಕಾರಿ ಹಾಗೂ ಸಿಬ್ಬಂದಿಯವರು ಶ್ರೀಗಂಧ ಕಳ್ಳ ಸಾಗಾಣಿಕೆದಾರ ವೀರಪ್ಪನನ್ನು ಬಂಧಿಸಲು ಕಾರ್ಯಮಗ್ನರಾಗಿರುತ್ತಾರೆ.

ಆ) ಎರಡು ಜನ ಉಪ ಸಂರಕ್ಷಣಾಧಿಕಾರಿಗಳು ಮತ್ತು ಬೇರೆ ಬೇರೆ ಸ್ಥಾನದ ಇತರ ೫೦ ಜನ ಅಧಿಕಾರಿಗಳನ್ನು ಟಾಸ್ಕ ಫೋರ್ಸ್ ಜೊತೆಗೆ ಅರಣ್ಯ ಇಲಾಖೆಯ ಸಿಬ್ಬಂದಿಯನ್ನು ಸಹಾಯಕ್ಕಾಗಿ ನೇರಿಸಲಾಗಿದೆ.

ಇ) ೧೦-೧೧-೧೯೯೦ ರವರೆಗೆ ರೂ. ೭,೭೯,೨೬೦-೦೦ ಖರ್ಚಾಗಿರಂತ್ತದೆ.

ಈ) ಹೌದು ೧೯೮೬ರಲ್ಲಿ ಪೋಲೀಸರಿಗೆ ಸಿಕ್ಕಿ ತಪ್ಪಿಸಿಕೊಂಡಿರುತ್ತಾನೆ.

ರಾಣೇಬೆನ್ನೂರು ತಾಲ್ಲೂಕಿನ ಮೆಡಲೇರಿ ಗ್ರಾಮದಲ್ಲಿ ಒಳಚರಂಡಿ ಸೌಲಭ್ಯ

೫೧. ಶ್ರೀ ಕೆ. ಬಿ. ಕೋಳಿವಾಡ (ರಾಣೆಬೆನ್ನೂರು).—ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಣೆಬೆನ್ನೂರು ತಾಲ್ಲೂಕು, ಮೆಡ್ಲೇರಿ ಗ್ರಾಮದಲ್ಲಿ ಒಳ ಚರಂಡಿ ನಿರ್ಮಾಣಕ್ಕೆ ಸಂಬಂಧಿಸಿದಂತೆ, ಯಾವುದಾದರೂ ಪ್ರಸ್ತಾವನೆಯು ಸರ್ಕಾರದ ಮುಂದೆ ಇದೆಯೇ ?

ಆ) ಆಗಿದ್ದ ಪಕ್ಷದಲ್ಲಿ. ಈ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ?

ಇ) ಸಾಕಷ್ಟು ಕುಡಿಯುವ ನೀರಿನ ಸೌಕರ್ಯವುಳ್ಳ ರಾಜ್ಯದ ದೊಡ್ಡ ಗ್ರಾಮಗಳಲ್ಲಿ ಒಳ ಚರಂಡಿ ವ್ಯವಸ್ಥೆಯನ್ನು ಒದಗಿಸಲು ಸರ್ಕಾರವು ಯೋಚಿಸುತ್ತಿದೆಯೇ ?

ಈ) ಆಗಿದ್ದ ಪಕ್ಷದಲ್ಲಿ ಈ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ?

ಶ್ರೀ ಬಿ. ಬಸವಲಿಂಗಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖಾ ಸಚಿವರು).—

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

ಇ) ಇಲ್ಲ

ಈ) ಉದ್ಭವಿಸುವುದಿಲ್ಲ

ಜಲ್ಲಿ ಕಲ್ಲಿನ ಗಣಿಗಳನ್ನು ತೆಗೆಯಂಬುದು

೫೬. ಶ್ರೀ ಉಮೇಶ ಭಟ್ (ಅಂಕೋಲ).—ಮಾನ್ಯ ಅರಣ್ಯ ರಾಜ್ಯ ಖಾತೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಅರಣ್ಯ ಪ್ರದೇಶದಲ್ಲಿ ಬರುವ ಜಲ್ಲಿ ಕಲ್ಲಿನ ಖಣಿಗಳನ್ನು ತೆಗೆಯಲು ಸಾರ್ವಜನಿಕರು ಹಲವಾರು ಬಾರಿ ಸರ್ಕಾರದವರನ್ನು ವಿನಂತಿಸಿಕೊಂಡಿರುವರೆ ?